(ಸಾಕ್ಷಿ ತನಗೆ ಕನ್ನಡ ಭಾಷೆ ಮಾತನಾಡಲು ಮತ್ತು ಅರ್ಥ ಮಾಡಿಕೊಳ್ಳಲು ಬರುವುದಿಲ್ಲವೆಂದು ಹೇಳಿದ್ದರಿಂದ ಶ್ರೀ ಆರ್‌ಎನ್‌ಎನ್ ವಕೀಲರನ್ನು ತರ್ಜುಮೆದಾರರಾಗಿ ನೇಮಕ ಮಾಡಲಾಯಿತು.)

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 15-03-2017

ಪಾಟೀಸವಾಲು ಃ ಶ್ರೀ ಎಎಸ್‌ಎನ್‌ಎಚ್ ವಕೀಲರಿಂದ ವಾದಿ ಪರವಾಗಿ,

ಈ ದಾವೆಯನ್ನು ಮೀರಾ ಮೊಹಿದ್ದಿನ್ ಮತ್ತು ಅವರ ಮಕ್ಕಳ ಹಾಕಿರುತ್ತಾರೆ. ವಾದಿಗಳು ಆಸ್ತಿ ತಮಗೆ ಸೇರಿದ್ದು ಎಂದು ಹೇಳಿ ಈ ದಾವೆ ಮಾಡಿರುತ್ತಾರೆ. ಆದರೆ ದಾವಾ ಸ್ವತ್ತು ಅವರಿಗೆ ಸೇರಿರುವುದಿಲ್ಲ. ಹನುಮಾನ್ ನಗರದಲ್ಲಿರುವ ಮನೆ ಮತ್ತು ಜಾಗಕ್ಕೆ ಸಂಬಂಧಪಟ್ಟಂತೆ ದಾವೆ ಮಾಡಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ದಾವಾ ಸ್ಥಳದ ವಿಸ್ತೀರ್ಣ 4½ ಎಕರೆ ಇರುತ್ತದೆ. ದಾವಾ ಆಸ್ತಿ ವಾದಿಗಳಿಗೆ ಯಾವ ದಾಖಲೆಯ ಆಧಾರದ ಮೇಲೆ ಮತ್ತು ಯಾವಾಗ ಅವರ ಹೆಸರಿಗೆ ಬಂತು ಎನ್ನುವುದು ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿ 2ನೇ ಪ್ರತಿವಾದಿ ಫಕೀ ಇಸ್ಮಾಯಿಲ್ ರವರಿಗೆ ದಾವಾ ಸ್ಥಳವನ್ನು ಕೊಟ್ಟಿರುವುದಾಗಿ ನನಗೆ ಹೇಳಿರುತ್ತಾರೆ. ನನ್ನ ತಾಯಿ ಯಾವಾಗ 2ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿ ನನ್ನ



ಅಣ್ಣನಾದ 2ನೇ ಪ್ರತಿವಾದಿಗೆ ಕ್ರಯ ಪತ್ರದ ಮುಖಾಂತರ ಕೊಟ್ಟಿರುತ್ತಾರೆ. 20 ಸಾವಿರ ರೂಪಾಯಿಗೆ ನನ್ನ ತಾಯಿ 2ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ಹೇಳುತ್ತಿದ್ದರು. ಕ್ರಯಪತ್ರದ ದಾಖಲೆ ನನ್ನ ಬಳಿ ಇರುವುದಿಲ್ಲ. ಕ್ರಯಪತ್ರ 2ನೇ ಪ್ರತಿವಾದಿಯ ಬಳಿ ಇರಬಹುದು. ದಾವಾ ಸ್ವತ್ತು ವಾದಿ 1(ಎ) ಮತ್ತು 2ನೇ ವಾದಿಗೆ ಕ್ರಯಪತ್ರ ಆಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತು ವಾದಿ 1(ಎ) ಮತ್ತು 2ನೇ ವಾದಿಯ ಕ್ರಯದ ಹಕ್ಕಿನ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ವಾದಿ 1(ಎ) ರವರು 1ನೇ ವಾದಿ ಮತ್ತು 3 ರಿಂದ 6ನೇ ವಾದಿಗೆ ತಮ್ಮ ಅರ್ಧ ಅಂಶದ ಹಕ್ಕನ್ನು ಬಿಟ್ಟುಕೊಟ್ಟಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ವಾದಿ 1(ಎ) ರವರು 1ನೇ ವಾದಿ ಮತ್ತು 3 ರಿಂದ 6ನೇ ವಾದಿಗೆ ತಮ್ಮ ಅರ್ಧ ಅಂಶದ ಹಕ್ಕನ್ನು ಬಿಟ್ಟುಕೊಟ್ಟ ನಂತರ ಪೂರ ದಾವಾ ಆಸ್ತಿ ಅಸಲು ವಾದಿಯರ ಹಕ್ಕಿಗೆ ಒಳಪಟ್ಟಿರುತ್ತದೆ ಎಂದರೆ ಸರಿಯಲ್ಲ. ಈ ದಾವೆ ಹಾಕಿದ ನಂತರ 1ನೇ ವಾದಿ ತೀರಿಕೊಂಡಿರುತ್ತಾರೆ ಎಂದರೆ ಅವರು ಬಾಂಬೆಯಲ್ಲಿರುವುದರಿಂದ ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರಿದು 1ನೇ ವಾದಿ ಬಿಬಿ ಆಯಿಶಾ ತೀರಿಕೊಂಡಿರುವ ವಿಚಾರ ಹೊರಗಡೆಯವರಿಂದ ಕೇಳಿ ತಿಳಿದುಕೊಂಡಿರುತ್ತೇನೆ ಎಂದು

ಹೇಳುತ್ತಾರೆ. ದಾವಾ ಆಸ್ತಿ ಈಗ ವಾದಿಗಳ ಕಬಜಾ ಮತ್ತು ಹಕ್ಕಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಈಗ ಹೇಳಲು ನೆನಪಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಯಾವ ಯಾವ ದಾಖಲೆಗಳು ಎಂದು ಹೇಳಿ ಬರೆದಿದ್ದಾರೆ ಎಂದು ನನಗೆ ಈಗ ಹೇಳಲು ಗೊತ್ತಾಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ದಾಖಲೆಗಳ ದಿನಾಂಕಗಳನ್ನು ಹೇಳಲು ನನಗೆ ಆಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ದಾಖಲೆಗಳು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ದಾಖಲೆಗಳನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾಖಲೆಗೆ ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರಿದು ಈಗ ಹೇಳಲು ನೆನಪಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಎಷ್ಟು ದಾಖಲೆಗಳ ಬಗ್ಗೆ ಬರೆದಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ದಾಖಲೆಗಳನ್ನು 2ನೇ ಪ್ರತಿವಾದಿಯಾದ ಫಕೀ ಇಸ್ಮಾಯಿಲ್ ರವರು ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ದಾಖಲೆಗಳನ್ನು ತಯಾರು ಮಾಡಿದ ಸಮಯದಲ್ಲಿ ನಾನು ಹಾಜರಿರಲಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ದಾಖಲೆಗಳಿಗೆ ಸಂಬಂಧಿಸಿ 17 ಲಕ್ಷ ರೂಪಾಯಿಗಳಿಗೆ ದಾಖಲೆಗಳನ್ನು ಬರೆದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ದಾಖಲೆಗಳನ್ನು ಎಲ್ಲಿ ತಯಾರು ಮಾಡಿರುತ್ತಾರೆ ಎಂದು ನನ್ನ ಅಣ್ಣನಿಗೆ ಗೊತ್ತಿರುತ್ತದೆ, ನನಗೆ ಗೊತ್ತಿರುವುದಿಲ್ಲ. ಸದ್ರಿ 17 ಲಕ್ಷದಲ್ಲಿ ನನಗೂ ಸಹ 1 ಲಕ್ಷ





ಚಿಲ್ಲರೆಯಷ್ಟು ಹಣ ಕೊಟ್ಟಿರುತ್ತಾರೆ. ನನಗೆ ನಗದು ರೂಪದಲ್ಲಿ ಹಣ ಕೊಟ್ಟಿರುತ್ತಾರೆ. ಒಟ್ಟೂ 17 ಲಕ್ಷ ನಗದು ರೂಪದಲ್ಲಿ ನನ್ನ ಅಣ್ಣನಿಗೆ ಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ದಾಖಲೆಗಳು 2ನೇ ಪ್ರತಿವಾದಿ ಫೋರ್ಜರಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾಯಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಕೆಎಸ್‌ರೈ ನೋಟರಿಯವರೊಂದಿಗೆ ಒಳಸಂಚು ಮಾಡಿ 2ನೇ ಪ್ರತಿವಾದಿ ದಾಖಲೆಗಳನ್ನು ಫೋರ್ಜರಿ ಮಾಡಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನೂ ಸಹ ನನ್ನ ಅಣ್ಣನೊಂದಿಗೆ ಶಾಮೀಲಾಗಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣ 2ನೇ ಪ್ರತಿವಾದಿ ಹೇಳಿದ ಹಾಗೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಗಳನ್ನು ಅಪಹರಿಸುವ ಸಲುವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆ. ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.
ಸಹಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಭಟ್ಕಳ